**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ 19 ಡಿವಿಪಿ(2) 2013

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:04-09-2013.

**ಸುತ್ತೋಲೆ**

ವಿಷಯ: 2014-15ನೇ ಸಾಲಿಗೆ ರಾಜ್ಯದಲ್ಲಿ ಹಾಲಿ ಇರುವ 81 ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ನವದೆಹಲಿಯ ಎಐಸಿಟಿಇ ಯ ಹಾಗೂ ರಾಜ್ಯ ಸರ್ಕಾರದ ಮಾನ್ಯತೆ ಪಡೆಯುವ ಬಗ್ಗೆ.

-0-

ರಾಜ್ಯದಲ್ಲಿ ಹಾಲಿ ಇರುವ 81 ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ 2013-14ನೇ ಸಾಲಿನವರೆಗೆ ನವದೆಹಲಿಯ ಎಐಸಿಟಿಇಯ ಹಾಗೂ ರಾಜ್ಯ ಸರ್ಕಾರದ ಅನುಮೋದನೆ ಇರುವುದು ತಿಳಿದ ವಿಷಯವೇ ಆಗಿರುತ್ತದೆ. ಆದರೂ ಸಹ ಎಐಸಿಟಿಇಯ ಪರಿಷ್ಕೃತ ಮಾರ್ಗಸೂಚಿಗಳನುಸಾರ ಕೆಲವು ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರು ವೆಬ್‌ಪೋರ್ಟಲ್ ಮುಖಾಂತರ ಎಐಸಿಟಿಇಗೆ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಿ, ಎಐಸಿಟಿಇಯ ಅನುಮೋದನೆಯನ್ನು ಪಡೆದುಕೊಂಡಿರುತ್ತಾರೆ.

2014-15ನೇ ಸಾಲಿಗೆ ಸಂಬಂಧಿಸಿಂತೆ ಸದ್ಯದಲ್ಲಿಯೇ ಎಐಸಿಟಿಇಯು ಮಾರ್ಗಸೂಚಿಗಳನ್ನು ಬಿಡುಗಡೆಗೊಳಿಸುವುದಲ್ಲದೆ ಪ್ರಮುಖ ದಿನ ಪತ್ರಿಕೆಗಳಲ್ಲಿ ಪಾಲಿಟೆಕ್ನಿಕ್‌ಗಳಿಗೆ ಎಐಸಿಟಿಇಯ ಮಾನ್ಯತೆಯನ್ನು ಪಡೆಯುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಿ ಪತ್ರಿಕಾ ಪ್ರಕಟಣೆಯನ್ನು ನೀಡುತ್ತದೆ. ಎಐಸಿಟಿಇಯ ವಿವರವಾದ ಮಾರ್ಗಸೂಚಿಗಳನ್ನು www.aicte-india.org ಈ ವೆಬ್ ಸೈಟ್‌ನ "Approval process Handbook" ನಲ್ಲಿ ವೀಕ್ಷಿಸಬಹುದಾಗಿದೆ.

ಎಐಸಿಟಿಇಯ ಆನ್‌ಲೈನ್ ಅರ್ಜಿಗಳನ್ನು ಬಹಳ ಜಾಗರೂಕತೆಯಿಂದ ಭರ್ತಿಮಾಡಲು ತಿಳಿಸಲಾಗಿದೆ. ಮತ್ತು ಯಾವುದೇ ಲೋಪದೋಷಗಳಿಗೆ (deficiencies) ಅವಕಾಶವನ್ನು ನೀಡದೆ ಆನ್‌ಲೈನ್ ಅರ್ಜಿಯನ್ನು ಹೆಚ್ಚಿನ ಜವಾಬ್ದಾರಿಯಿಂದ ಅಪ್‌ಲೋಡ್ ಮಾಡಲು ತಿಳಿಸಲಾಗಿದೆ. ಎಐಸಿಟಿಇಗೆ ಸಲ್ಲಿಸಿದ ಆನ್‌ಲೈನ್ ಅರ್ಜಿಯ ಒಂದು ಹಾರ್ಡ್‌ಕಾಪಿಯನ್ನು ತಪ್ಪದೆ ನಿರ್ದೇಶನಾಲಯಕ್ಕೆ ಸಲ್ಲಿಸಬೇಕಾಗಿ ಸಹ ತಿಳಿಸಲಾಗಿದೆ.

ಸರ್ಕಾರಿ ಪಾಲಿಟೆಕ್ನಿಕ್‌ಗಳು ಆನ್‌ಲೈನ್ ಅರ್ಜಿ ಸಲ್ಲಿಸಲು ಎಐಸಿಟಿಇಗೆ ಪ್ರೋಸೆಸಿಂಗ್ ಫೀಯನ್ನು ಸಂದಾಯ ಮಾಡಬೇಕಾಗಿರುವುದಿಲ್ಲ ಎಂದು ಸ್ಪಷ್ಟಪಡಿಸುತ್ತಾ ಎಐಸಿಟಿಇಯು ನಿಗಧಿಪಡಿಸಲಿರುವ ಕಡೆಯ ದಿನಾಂಕದೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕಾಗಿ ಮುನ್ಸೂಚನೆ ನೀಡಲಾಗಿದೆ. ಕಡೆಯ ದಿನಾಂಕದ ನಂತರ ಅರ್ಜಿ ಸಲ್ಲಿಸುವವರು ₹ 2.00 ಲಕ್ಷಗಳ ದಂಡ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ. ಅದ್ದರಿಂದ ಈ ದಿಸೆಯಲ್ಲಿ ಯಾವುದೇ ರೀತಿ ವಿಳಂಬಕ್ಕೆ ಅವಕಾಶವನ್ನು ನೀಡಬಾರದೆಂದು ಹಾಗೂ ಸಕಾಲದಲ್ಲಿ ಅರ್ಜಿಗಳನ್ನು ನವದೆಹಲಿಯ ಎಐಸಿಟಿಇಗೆ ಸಲ್ಲಿಸಬೇಕಾಗಿ ತಿಳಸಲಾಗಿದೆ.

ನಿರ್ದೇಶಕರು.
4/9/2013.

ಇವರಿಗೆ

1. ರಾಜ್ಯದ 81 ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ.
2. ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ - ನಿರ್ದೇಶನಾಲಯದ ಇ-ಗೌರ್‌ನೆನ್ಸ್ ಸೆಲ್‌ಗೆ.